## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 776 |
| ಸದಸ್ಯರ ಹೆಸರು | : ಶ್ರೀ ಎಂ. ನಾರಾಯಣಸ್ವಾಮಿ |
| ಉತ್ತರಿಸುವ ಸಚಿವರು | : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು |
| ಉತ್ತರಿಸುವ ದಿನಾಂಕ | : 25-09-2020 |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ. | 2019-20ನೇ ಸಾಲಿನಲ್ಲಿ ಕೆ.ಎಸ್.ಆರ್.ಟಿ.ಸಿ ಮತ್ತು ಬಿ.ಎಂ.ಟಿ.ಸಿಗಳಿಂದ ಆದ ಲಾಭ ಎಷ್ಟು; ನಷ್ಟವಾಗಿದ್ದಲ್ಲಿ ಅದಕ್ಕೆ ಕಾರಣವೇನು; (ಲಾಭ ಹಾಗೂ ನಷ್ಟದ ವಿವರ ನೀಡುವುದು) | 2019-20ನೇ ಸಾಲಿನಲ್ಲಿ ಸಾರಿಗೆ ಸಂಸ್ಥೆಗಳ ನಷ್ಟದ ವಿವರ ಈ ಕೆಳಕಂಡಂತಿದೆ:<br>(ರೂ.ಕೋಟಿಗಳಲ್ಲಿ)<br>ಸಂಸ್ಥೆಗಳು — ನಷ್ಟ<br>ಕ.ರಾ.ರ.ಸಾ.ನಿಗಮ — 179.04<br>ಬೆಂ.ಮ.ಸಾ.ಸಂಸ್ಥೆ — 549.34<br>ವಾ.ಕ.ರ.ಸಾ.ಸಂಸ್ಥೆ — 186.46<br>ಈ.ಕ.ರ.ಸಾ.ಸಂಸ್ಥೆ — 109.82<br>ನಷ್ಟಕ್ಕೆ ಕಾರಣರಾಗಿರುವ ಅಂಶಗಳನ್ನು <u>ಅನುಬಂಧ</u>ದಲ್ಲಿ ನೀಡಲಾಗಿದೆ. |
| ಆ. | ಕೊರೋನ ಲಾಕ್‌ಡೌನ್ ಸಮಯದಲ್ಲಿ ಇಲಾಖೆಯ ನೌಕರರಿಗೆ ಸರಿಯಾಗಿ ಮಾಸಿಕ ಸಂಬಳ ನೀಡಲಾಗಿದೆಯೇ; | ಲಾಕ್‌ಡೌನ್ ಸಂದರ್ಭದಲ್ಲಿ ಸಾರಿಗೆ ವ್ಯವಸ್ಥೆ ಸ್ಥಗಿತಗೊಂಡಿದ್ದರಿಂದ, ಸರ್ಕಾರದಿಂದ ವಿಶೇಷ ಅನುದಾನವನ್ನು ಬಿಡುಗಡೆಗೊಳಿಸಿ, ಏಪ್ರಿಲ್-2020ರಿಂದ ಆಗಸ್ಟ್-2020ರವರೆಗೆ ಸಾರಿಗೆ ಸಂಸ್ಥೆಗಳ ನೌಕರರಿಗೆ ನಿಯಮಾನುಸಾರ ವೇತನ ಪಾವತಿ ಮಾಡಲಾಗಿರುತ್ತದೆ. |
| ಇ. | ಕೋವಿಡ್ ಲಾಕ್‌ಡೌನ್ ಸಮಯದಲ್ಲಿ ವಲಸೆ ಕಾರ್ಮಿಕರನ್ನು ತಮ್ಮ ತಮ್ಮ ಊರುಗಳಿಗೆ ಕಳುಹಿಸುವಲ್ಲಿ ಸಾರಿಗೆ ಇಲಾಖೆ ವಿಫಲರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕೋವಿಡ್-19ನಿಂದಾಗಿ ವಿಧಿಸಲಾಗಿದ್ದ ಲಾಕ್‌ಡೌನ್ ಸಮಯದಲ್ಲಿ ವಲಸೆ ಕಾರ್ಮಿಕರನ್ನು ತಮ್ಮ ತಮ್ಮ ಊರುಗಳಿಗೆ ವ್ಯವಸ್ಥಿತವಾಗಿ ಕಳುಹಿಸಲಾಗಿರುತ್ತದೆ.<br>ಭಾರತೀಯ ರೈಲ್ವೆಯು ವಲಸಿಗ ಕಾರ್ಮಿಕರು ಹಾಗೂ ಪರಸ್ಥಳಗಳಲ್ಲಿ ಸಿಲುಕಿಕೊಂಡಿರುವ ಇತರೆ ಪ್ರಯಾಣಿಕರಿಗೆ, ಅವರುಗಳ ಊರುಗಳನ್ನು ತಲುಪಲು ಅನುಕೂಲವಾಗುವಂತೆ "ಶ್ರಮಿಕ ವಿಶೇಷ ರೈಲುಗಳ" ಸೇವೆಗಳನ್ನು ಆರಂಭಿಸಿದ್ದರ ಹಿನ್ನಲೆಯಲ್ಲಿ ವಿವಿಧ ರಾಜ್ಯಗಳ ವಲಸಿಗ ಕಾರ್ಮಿಕರಿಗೆ ಅವರುಗಳ ವಾಸಸ್ಥಳ/ಪರಿಹಾರ ಕೇಂದ್ರದಿಂದ ರೈಲು ನಿಲ್ದಾಣಗಳಿಗೆ ತಲುಪಿಸಲು ಬೆಂ.ಮ.ಸಾ.ಸಂಸ್ಥೆಯಿಂದ ವಿಶೇಷ ಸಾರಿಗೆ ಸೇವೆಯನ್ನು ಒದಗಿಸಲಾಗಿರುತ್ತದೆ. |

| | | |
|---|---|---|
| ಈ. | ವಿಪಕ್ಷಗಳ ಒತ್ತಾಯದ ಮೇರೆಗೆ ಎಷ್ಟು ವಲಸೆ ಕಾರ್ಮಿಕರಿಗೆ ಉಚಿತ ಪ್ರಯಾಣಕ್ಕೆ ಅವಕಾಶ ಮಾಡಕೊಡಲಾಗಿದೆ? (ವಿವರ ನೀಡುವುದು) | ಉಚಿತ ಪ್ರಯಾಣಕ್ಕೆ ಅವಕಾಶ ಮಾಡಿಕೊಡಲಾದ ವಲಸೆ ಕಾರ್ಮಿಕರ ಸಂಖ್ಯೆ ಈ ಕೆಳಕಂಡಂತಿದೆ: |

| ಸಂಸ್ಥೆಗಳು | ವಲಸೆ ಕಾರ್ಮಿಕರ ಸಂಖ್ಯೆ |
|---|---|
| ಕ.ರಾ.ರ.ಸಾ.ನಿಗಮ | 83697 |
| ಬೆಂ.ಮ.ಸಾ.ಸಂಸ್ಥೆ | 238211 |
| ವಾ.ಕ.ರ.ಸಾ.ಸಂಸ್ಥೆ | 39948 |
| ಈ.ಕ.ರ.ಸಾ.ಸಂಸ್ಥೆ | 97534 |

ವಿವಿಧ ರಾಜ್ಯಗಳ ವಲಸಿಗ ಕಾರ್ಮಿಕರಿಗೆ ಅವರುಗಳ ವಾಸಸ್ಥಳ/ಪರಿಹಾರ ಕೇಂದ್ರದಿಂದ ರೈಲು ನಿಲ್ದಾಣಗಳಿಗೆ ತಲುಪಿಸಲು ಕಾರ್ಯಾಚರಣೆಯಾಗಿರುವ 154 ರೈಲುಗಳಿಗೆ ಬೆಂ.ಮ.ಸಾ.ಸಂಸ್ಥೆಯಿಂದ ವಿಶೇಷ ಸಾರಿಗೆ ಸೇವೆಯನ್ನು ಒದಗಿಸಲಾಗಿರುತ್ತದೆ.

ಸಂಖ್ಯೆ: ಟಿಡಿ 171 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯ ಮಂತ್ರಿಗಳು ಹಾಗೂ
ಸಾರಿಗೆ ಸಚಿವರು

## ಅನುಬಂಧ

## ಕ.ರಾ.ರ.ಸಾ.ನಿಗಮವು ನಷ್ಟದಲ್ಲಿರಲು ಪ್ರಮುಖ ಕಾರಣಗಳು

- ಕ.ರಾ.ರ.ಸಾ.ನಿಗಮದ ವ್ಯಾಪ್ತಿಯಲ್ಲಿ ಬರುವ ಬೆಂಗಳೂರು ಗ್ರಾಮಾಂತರ, ತುಮಕೂರು, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ, ಮೈಸೂರು, ಚಾಮರಾಜನಗರ. ಮಂಡ್ಯ, ಹಾಸನ, ಚಿಕ್ಕಮಗಳೂರು, ಮಂಗಳೂರು, ಉಡುಪಿ, ಪುತ್ತೂರು, ಕೊಡಗು, ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ ಜಿಲ್ಲಾ ವ್ಯಾಪ್ತಿಯ ರಾಷ್ಟ್ರೀಕೃತ ಮಾರ್ಗಗಳಲ್ಲಿ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಕರಾರಸಾ ನಿಗಮದ ವತಿಯಿಂದ ಸಾಕಷ್ಟು ಸಂಖ್ಯೆಯಲ್ಲಿ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ಆದಾಗ್ಯೂ, ಮೇಲ್ಕಂಡ ಜಿಲ್ಲೆಗಳ ವ್ಯಾಪ್ತಿಯ ರಾಷ್ಟ್ರೀಕೃತ ಮಾರ್ಗಗಳಲ್ಲಿ ಖಾಸಗಿ ಪ್ರವರ್ತಕರ ಖಾಸಗಿ ಬಸ್, ಮ್ಯಾಕ್ಸಿ ಕ್ಯಾಬ್, ಜೀಪ್, ಅಪೆ ಆಟೋ, ಮಿನಿ ಬಸ್, ಇತ್ಯಾದಿ ಪ್ರಯಾಣಿಕರ ವಾಹನಗಳು ಅನಧಿಕೃತವಾಗಿ ಕಾರ್ಯಾಚರಣೆ ಮಾಡಿ ನಿಗಮದ ಸಾರಿಗೆಗಳೊಂದಿಗೆ ಅನಾರೋಗ್ಯಕರ ಪೈಪೋಟಿ ನಡೆಸಿ, ನಿಗಮದ ಸಾರಿಗೆಗಳ ಆದಾಯಕ್ಕೆ ಧಕ್ಕೆ ಉಂಟು ಮಾಡುತ್ತಿರುತ್ತಾರೆ.
- ಕ.ರಾ.ರ.ಸಾ.ನಿಗಮದ ಹಲವಾರು ಬಸ್ಸು ನಿಲ್ದಾಣದ ಪ್ರದೇಶಗಳಲ್ಲಿ ಖಾಸಗಿ ಪ್ರವರ್ತಕರ ಬಸ್ಸುಗಳನ್ನು ನಿಲ್ಲಿಸಲು ನಿರ್ಬಂಧವಿದ್ದರೂ ಹಲವಾರು ಬಸ್ಸು ನಿಲ್ದಾಣಗಳ ಸುತ್ತಮುತ್ತ ಖಾಸಗಿ ಪ್ರವರ್ತಕರು ನಿಯಮಾವಳಿಗಳನ್ನು ಉಲ್ಲಂಘಿಸಿ ಬಸ್ಸು ನಿಲ್ದಾಣದ ಸುತ್ತಮುತ್ತ ಪ್ರಯಾಣಿಕರನ್ನು ಹತ್ತಿಸಿಕೊಳ್ಳುತ್ತಿದ್ದು ಇದರಿಂದ ನಿಗಮಕ್ಕೆ ನ್ಯಾಯೋಚಿತವಾಗಿ ಬರಬೇಕಾದ ಆದಾಯಕ್ಕೆ ಧಕ್ಕೆಯುಂಟು ಮಾಡುತ್ತಿದ್ದಾರೆ.
- ಕ.ರಾ.ರ.ಸಾ.ನಿಗಮದಲ್ಲಿ ಮಾರ್ಚ್–2020 ರ ಅಂತ್ಯಕ್ಕೆ 8136 ಅನುಸೂಚಿಗಳನ್ನು ಕಾರ್ಯಾಚರಣೆ ಮಾಡಲಾಗಿ, ಅದರಲ್ಲಿ 2995 ಅನುಸೂಚಿಗಳು ಸಾಮಾನ್ಯ ಅನುಸೂಚಿಗಳಾಗಿರುತ್ತವೆ. ಶೇ.36.81 ರಷ್ಟು ಸಾರಿಗೆಗಳನ್ನು ಗ್ರಾಮೀಣ ಭಾಗಗಳಿಗೆ ವಿದ್ಯಾರ್ಥಿಗಳ ಅನುಕೂಲಕ್ಕಾಗಿ, ಜನಪ್ರತಿನಿಧಿಗಳ ಬೇಡಿಕೆಗನುಗುಣವಾಗಿ ಕಾರ್ಯಾಚರಿಸಲಾಗುತ್ತಿದೆ. ನಿಗಮದ ವ್ಯಾಪ್ತಿಯ ಮಾರ್ಗಗಳಲ್ಲಿ ಒಟ್ಟು 52141 ಸಿಂಗಲ್ ಟ್ರಿಪ್‌ಗಳನ್ನು ಪ್ರತಿ ದಿನ ಕಾರ್ಯಾಚರಣೆ ಮಾಡುತ್ತಿದ್ದು, ಅದರಲ್ಲಿ 28388 ಸಾಮಾನ್ಯ ಸುತ್ತುವಳಿಗಳನ್ನು ಅಂದರೆ ಶೇ.55.75 ರಷ್ಟು ಸ್ಥಳೀಯ ಗ್ರಾಮಾಂತರ ಪ್ರದೇಶಗಳಿಗೆ ಕಾರ್ಯಾಚರಣೆ ಮಾಡಲಾಗುತ್ತಿದೆ. ಈ ಸುತ್ತುವಳಿಗಳಲ್ಲಿ ನಿರೀಕ್ಷಿತ ಸಾರಿಗೆ ಆದಾಯ ಬರದೆ ನಷ್ಟ ಉಂಟಾಗುತ್ತಿರುತ್ತದೆ. ಸದರಿ ಟ್ರಿಪ್‌ಗಳ ಕಾರ್ಯಾಚರಣೆಯಿಂದ ನಷ್ಟ ಉಂಟಾಗುತ್ತಿದ್ದರೂ ಸಾರ್ವಜನಿಕ ಪ್ರಯಾಣಿಕರ ಮತ್ತು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಅನಿವಾರ್ಯವಾಗಿ ಸಾರಿಗೆಗಳನ್ನು (Obligatory services) ಕಾರ್ಯಾಚರಣೆ ಮಾಡಬೇಕಾಗಿರುವ ಪರಿಸ್ಥಿತಿ ಇರುತ್ತದೆ.
- ಭಾರತ್ ಬಂದ್, ಕರ್ನಾಟಕ ಬಂದ್, ಇತ್ಯಾದಿ ಕಾರಣಗಳಿಂದಾಗಿ ಸಾರಿಗೆಗಳ ಕಾರ್ಯಾಚರಣೆಗೆ ತೊಡಕಾಗಿ ಸಾರಿಗೆಗಳನ್ನು ಕಾರ್ಯಾಚರಣೆ ಮಾಡದಿರುವುದರಿಂದ ಸಾರಿಗೆ ಆದಾಯ ನಷ್ಟ ಉಂಟಾಗಲು ಕಾರಣವಾಗಿರುತ್ತದೆ.
- ನಗರದ ಸಾರ್ವಜನಿಕ ಪ್ರಯಾಣಿಕರಿಗೆ ಹೆಚ್ಚಿನ ಸಾರಿಗೆ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ನಿಗಮವು ಮಾರ್ಚ್–2020 ರ ಅಂತ್ಯಕ್ಕೆ 16 ನಗರಗಳಲ್ಲಿ 774 ನಗರ ಸಾರಿಗೆ ವಾಹನಗಳನ್ನು ಕಾರ್ಯಾಚರಣೆ ಮಾಡಿದ್ದು, ಈ ಪೈಕಿ ಹೆಚ್ಚಿನ ಸಾರಿಗೆಗಳು ನಷ್ಟದಲ್ಲಿ ಕಾರ್ಯಾಚರಣೆಯಾಗುತ್ತಿರುತ್ತವೆ.
- ಮಾರ್ಚ್–2020ರ ಮಾಹೆಯಲ್ಲಿ ಕೋವಿಡ್–19ರ ಸೋಂಕಿನ ಕಾರಣ ಪ್ರಯಾಣಿಕರ ಒತ್ತಡ ಕಡಿಮೆಯಾಗಿರುತ್ತದೆ ಮತ್ತು ದಿನಾಂಕ 22.03.2020 ರಿಂದ ರಾಷ್ಟ್ರವ್ಯಾಪಿ ಲಾಕ್‌ಡೌನ್ ಘೋಷಿಸಿದ್ದರಿಂದಾಗಿ ಸಾರಿಗೆಗಳ ಕಾರ್ಯಾಚಾರಣೆಯನ್ನು ಸಂಪೂರ್ಣ ಸ್ಥಗಿತಗೊಳಿಸಲಾಗಿರುತ್ತದೆ.
- ಕೋವಿಡ್–19 ಸಾಂಕ್ರಾಮಿಕದ ಹಿನ್ನಲೆಯಲ್ಲಿ ಲಾಕ್ ಡೌನ್‌ನಿಂದಾಗಿ ಸಾರಿಗೆ ಆದಾಯ ಸಂಗ್ರಹದಲ್ಲಿ ಉಂಟಾದ ಕೊರತೆ, ಡೀಸೆಲ್ ಬೆಲೆ ಹೆಚ್ಚಳ ಹಾಗೂ ವರ್ಷದಿಂದ ವರ್ಷಕ್ಕೆ ಬಿಡಿ ಭಾಗಗಳ ಬೆಲೆಗಳಲ್ಲಿನ ಏರಿಕೆ. ಕಾಲಕಾಲಕ್ಕೆ ನಿಗಮದ ನೌಕರರಿಗೆ ನೀಡುವ ವೇತನ ಪರಿಷ್ಕರಣೆ ಮತ್ತು ತುಟ್ಟಿ ಭತ್ಯೆ ಹೆಚ್ಚಳಗಳು ನಷ್ಟಕ್ಕೆ ಕಾರಣವಾಗಿರುತ್ತದೆ.

## ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ

- ಸಂಸ್ಥೆಯ ಒಟ್ಟಾರೆ ವೆಚ್ಚದಲ್ಲಿ ಸುಮಾರು ಶೇ.80.0ರಷ್ಟು ಪಾಲು ಸಿಬ್ಬಂದಿ ವೆಚ್ಚ ಮತ್ತು ಇಂಧನ ವೆಚ್ಚಗಳಾಗಿರುತ್ತದೆ ಹಾಗೂ ಸಂಸ್ಥೆಯು ನಷ್ಟವನ್ನು ಅನುಭವಿಸಲು ಈ ಕೆಳಗಿನ ಅಂಶಗಳು ಪ್ರಮುಖ ಕಾರಣವಾಗಿರುತ್ತದೆ.
- ಪ್ರತಿ ವರ್ಷವು ಹೆಚ್ಚಾಗುತ್ತಿರುವ ಸಿಬ್ಬಂದಿ ವೆಚ್ಚ.
- ಪ್ರತಿ ಮಾಹೆ ಹೆಚ್ಚಾಗುತ್ತಿರುವ ಇಂಧನ ದರದಿಂದಾಗಿ ಅಧಿಕವಾಗುತ್ತಿರುವ ಇಂಧನ ವೆಚ್ಚ.
- ಸಂಸ್ಥೆಯ ವಾಹನಗಳಲ್ಲಿ ಸಂಚರಿಸುತ್ತಿದ್ದ ಸುಮಾರು 5 ಲಕ್ಷ ಪ್ರಯಾಣಿಕರು ನಮ್ಮ ಮೆಟ್ರೋಗೆ ವರ್ಗಾವಣೆಗೊಂಡ ಪ್ರಯುಕ್ತ ಸಾರಿಗೆ ಆದಾಯ ಗಳಿಕೆಯಲ್ಲಿ ಇಳಿಮುಖವಾಗಿರುತ್ತದೆ.
- ಬೆಂಗಳೂರು ಮಹಾನಗರದಲ್ಲಿ ಓಲಾ, ಉಬರ್‍ಸ್ ಇತರೇ ಕ್ಯಾಬ್‌ಗಳ ಕಾರ್ಯಾಚರಣೆಯಿಂದಾಗಿ ಸಾರಿಗೆ ಆದಾಯದ ಗಳಿಕೆಯಲ್ಲಿ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ.
- ಸಂಸ್ಥೆಯು ನೀಡುತ್ತಿರುವ ಉಚಿತ/ ರಿಯಾಯತಿ ವಿದ್ಯಾರ್ಥಿ ಪಾಸುಗಳು ಶೇ.50 ವೆಚ್ಚವನ್ನು ಸರ್ಕಾರ, ಶೇ.25 ರಷ್ಟು ವೆಚ್ಚವನ್ನು ಸಂಸ್ಥೆ ಹಾಗೂ ಶೇ.25 ರಷ್ಟು ವೆಚ್ಚವನ್ನು ವಿದ್ಯಾರ್ಥಿಗಳಿಂದ ಸಂಗ್ರಹ ಮಾಡಬೇಕಾಗಿರುತ್ತದೆ. ಎಸ್.ಸಿ. ಮತ್ತು ಎಸ್.ಟಿ. ವಿದ್ಯಾರ್ಥಿಗಳಿಗೆ ಶೇ.75 ಸರ್ಕಾರ ಮತ್ತು ಶೇ.25ರಷ್ಟು ಸಂಸ್ಥೆಯು ಭರಿಸಬೇಕಾಗಿದೆ.
- ಬೆಂಮಸಾಸಂಸ್ಥೆಯು ಬೆಂಗಳೂರು ನಗರಕ್ಕೆ ಸಾರಿಗೆ ಸೌಲಭ್ಯ ಒದಗಿಸಲು ಏಕಸ್ವಾಮ್ಯತೆಯನ್ನು ಹೊಂದಿರುತ್ತದೆ. ನಗರದಲ್ಲಿ ದಿನೇ ದಿನೇ ಖಾಸಗಿ ವಾಹನಗಳ ಸಂಖ್ಯೆಯು ಹೆಚ್ಚಾಗಿ ಸಂಚಾರ ದಟ್ಟಣೆ ಉಂಟಾಗುತ್ತಿದ್ದು, ಸಂಸ್ಥೆಯ ಭೌತಿಕ ಅಂಶಗಳ ಗುರಿಯನ್ನು ಸಾಧಿಸಲು ಕಷ್ಟಸಾಧ್ಯವಾಗಿರುತ್ತದೆ. ಆದ್ದರಿಂದ ಹೆಚ್ಚಿನ ನಷ್ಟವನ್ನು ಅನುಭವಿಸುತ್ತಿದೆ.
- ಸಂಚಾರ ದಟ್ಟಣೆಯಿಂದ ನಿಗದಿತ ಕಿ.ಮೀ ಗಳ ಆಚರಣೆ ಕಷ್ಟ ಸಾಧ್ಯವಾಗಿದ್ದು, ವಾಹನಗಳ ಬಳಕೆ (Vehicle Utilisation) ಕಡಿಮೆಯಾಗಿರುತ್ತದೆ.
- ಮಾರ್ಚ್-2020 ರಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗದಿಂದಾಗಿ ಪ್ರಯಾಣಿಕರು ಸಾರ್ವಜನಿಕ ಬಸ್ ಬಳಕೆಯನ್ನು ಕಡಿಮೆಗೊಳಿಸಿರುತ್ತಾರೆ.

## ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ

- ಮಾರ್ಚ-2020ರ ಅಂತ್ಯಕ್ಕೆ ಕೋವಿಡ್-19 ನಿಮಿತ್ತ ಲಾಕ್‌ಡೌನ್ ವಿಧಿಸಿದ್ದರಿಂದ ಸುಮಾರು 1.50 ಕೋಟಿ ಕಿಮೀಗಳು ರದ್ಧತಿಗೊಂಡು ಸುಮಾರು ರೂ. 46.00 ಕೋಟಿ ಸಾರಿಗೆ ಆದಾಯದಲ್ಲಿ ಕೊರತೆಯಾಗಿದೆ.
- ದಿ: 09-01-2015 ರಿಂದ 26-02-2020ವರೆಗೆ ಇಂಧನ ದರ ಹಾಗೂ ಸಿಬ್ಬಂದಿ ವೆಚ್ಚದ ಹೆಚ್ಚಳಕ್ಕನುಗುಣವಾಗಿ ಪ್ರಯಾಣ ದರ ನಿಯಮಿತವಾಗಿ ಪರಿಷ್ಕರಣೆಯಾಗದೇ ಸಾರಿಗೆ ಆದಾಯದಲ್ಲಿ ನಷ್ಟ ಉಂಟಾಗಿರುತ್ತದೆ.
- ವಿದ್ಯಾರ್ಥಿ ರಿಯಾಯಿತಿ ಪಾಸುಗಳ ವಿತರಣೆಯಿಂದ ಉಂಟಾಗುವ ಒಟ್ಟು ವೆಚ್ಚದ ಶೇಕಡಾ 50 ಪಾಲನ್ನು ಸರ್ಕಾರವು, ಶೇಕಡಾ 25 ಪಾಲನ್ನು ವಿದ್ಯಾರ್ಥಿಗಳಿಂದ ಹಾಗೂ ಉಳಿದ ಶೇಕಡಾ 25 ಪಾಲನ್ನು ಸಂಸ್ಥೆಯು ಭರಿಸಬೇಕಾಗಿರುತ್ತದೆ (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ಶೇಕಡಾ 75 ರಷ್ಟು ಪಾಲನ್ನು ಸರ್ಕಾರದಿಂದ ಮತ್ತು ಶೇಕಡಾ 25 ರಷ್ಟು ಪಾಲನ್ನು ಸಂಸ್ಥೆಯಿಂದ ಭರಿಸಬೇಕಾಗಿರುತ್ತದೆ).
- ಬಿಡಿಭಾಗ, ಟೈರು. ಟ್ಯೂಬು ಮತ್ತು ಇತರೆ ಸಾಮಗ್ರಿಗಳ ವೆಚ್ಚದಲ್ಲಿ ದರ ಹೆಚ್ಚಳಗೊಂಡಿದ್ದರಿಂದ ಸುಮಾರು ರೂ. 12.50 ಕೋಟಿ ಅರ್ಥಿಕ ನಷ್ಟ ಉಂಟಾಗಿರುತ್ತದೆ. ಅದೇ ರೀತಿಯಾಗಿ ಸಿಬ್ಬಂದಿ ವೆಚ್ಚದಲ್ಲಿ ಸುಮಾರು ರೂ.50.00 ಕೋಟಿ ಹೆಚ್ಚಳವಾಗಿರುತ್ತದೆ.

## ಈಶಾನ್ಯ ಕರ್ನಾಟಕ ರಸ್ತ ಸಾರಿಗೆ ಸಂಸ್ಥೆ

- ಈ ಭಾಗದಲ್ಲಿ ಹೆಚ್ಚಿನ ಸಂಖ್ಯೆಯ ಸಾಮಾನ್ಯ ಅನುಸೂಚಿಗಳು ಗ್ರಾಮೀಣ ಭಾಗದಲ್ಲಿ ಕಾರ್ಯಾಚರಣೆಯಾಗುತ್ತಿದ್ದು ಅವುಗಳ ಪ್ರತಿ ಕಿ.ಮೀ. ಆದಾಯ ವೆಚ್ಚಕ್ಕಿಂತ ಕಡಿಮೆ ಬರುತ್ತಿದೆ. ಸಂಸ್ಥೆಯ ವ್ಯಾಪ್ತಿಯಲ್ಲಿ ಒಟ್ಟು 600999 ಕಿ.ಮೀ. ಗ್ರಾಮೀಣ ಭಾಗದಲ್ಲಿ ಪ್ರತಿನಿತ್ಯ ಕಾರ್ಯಾಚರಣೆ ಮಾಡಲಾಗುತ್ತಿದೆ.
- ಸಂಸ್ಥೆಯಲ್ಲಿ ಪ್ರತಿ ನಾಲ್ಕು ವರ್ಷಕ್ಕೊಮ್ಮೆ ಸಿಬ್ಬಂದಿ/ಅಧಿಕಾರಿ ವೇತನ ಹೆಚ್ಚಿಸಬೇಕಾಗಿರುತ್ತದೆ. 2016ನೇ ಸಾಲಿನಲ್ಲಿ 12.50% ರಷ್ಟು ಹೆಚ್ಚಳವಾಗಿರುವುದರಿಂದ ರೂ 67.92 ಕೋಟಿಗಳಷ್ಟು ಹೆಚ್ಚುವರಿ ಹೊರೆಯಾಗಿರುತ್ತದೆ.
- ಈ.ಕ.ರ.ಸಾ.ಸಂಸ್ಥೆಯ ಭಾಗದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಕಾರ್ಯಾಚರಣೆ ಮಾಡಬೇಕಾದ ಅನುಸೂಚಿಗಳು (Obligatory Services) ಹೆಚ್ಚಿನ ಪ್ರಮಾಣದಲ್ಲಿ ಇರುವುದರಿಂದ ಇವುಗಳ ಆದಾಯ ತೃಪ್ತಿದಾಯಕವಾಗಿರುವುದಿಲ್ಲ.
- ಈ.ಕ.ರ.ಸಾ.ಸಂಸ್ಥೆಯ ವ್ಯಾಪ್ತಿಯಲ್ಲಿ ಗ್ರಾಮೀಣ ಭಾಗದಲ್ಲಿ ಕನಿಷ್ಠ ಸಾರಿಗೆ ಸೌಲಭ್ಯ ಒದಗಿಸಬೇಕಾಗಿರುವುದರಿಂದ 50% ರಿಂದ 60% ರಷ್ಟು 'ಸಿ' ಅನುಸೂಚಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.
- ಈ.ಕ.ರ.ಸಾ.ಸಂಸ್ಥೆಯ ವ್ಯಾಪ್ತಿಯಲ್ಲಿ ಜೆನರ್ಮ ಅಡಿಯಲ್ಲಿ ನಗರ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದ್ದು, ಜೆನರ್ಮ ನಗರ ಸಾರಿಗೆಗಳಿಂದ 2015-16 ರಿಂದ 2018-19ನೇ ಸಾಲಿನವರೆಗೆ ಒಟ್ಟು ರೂ. **59.69 ಕೋಟಿಗಳಷ್ಟು** ನಷ್ಟ ಉಂಟಾಗಿರುತ್ತದೆ.
- ಸಂಸ್ಥೆಯ ಅನುಸೂಚಿಗಳ ಭಾರವಿಅಂಶ (Load Factor) ಕಡಿಮೆ ಇರುತ್ತದೆ.
- ಈ ಭಾಗದಲ್ಲಿ ಜೀಪ್, ಕ್ರ್ಯೂಜರ್, ಟಂಟಂ ಮುಂತಾದ ಖಾಸಗಿ ವಾಹನಗಳು ಅನಧಿಕೃತವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಾಚರಣೆಯಾಗುತ್ತಿರುವುದರಿಂದ ಸಾಮಾನ್ಯ ಸಾರಿಗೆಗಳ ಆದಾಯ ಕುಂಠಿತವಾಗಲು ಮುಖ್ಯ ಕಾರಣವಾಗಿ ನಷ್ಟ ಹೆಚ್ಚಾಗಲು ಕಾರಣವಾಗಿರುತ್ತದೆ.
- ಕೆಲವು ಪ್ರಮುಖ ಮಾರ್ಗಗಳಲ್ಲಿ ಖಾಸಗಿ ವಾಹನಗಳು ಅನಧಿಕೃತವಾಗಿ ಕಾರ್ಯಾಚರಣೆ ಮಾಡುತ್ತಿರುವುದರಿಂದ ಸಂಸ್ಥೆಯ ಪ್ರತಿಷ್ಠಿತ ವಾಹನಗಳ ಭಾರವಿಅಂಶ ಕಡಿಮೆಯಾಗಿ ನಷ್ಟ ಹೊಂದಲು ಕಾರಣವಾಗಿರುತ್ತದೆ.

*****